**KARNATAKA STATE FINANCIAL CORPORATION**
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
**Established under the State Financial Corporations Act. 1951**
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆಯನ್ವಯ ಸ್ಥಾಪಿತ
**Head Office: No. 1/1, Thimmaiah Road,**
**Near Cantonment Railway Station, Bangalore – 560 052**
**Telephone: 080-22263454 E-mail: cblr@ksfc.co**


ISO 9002

*ಸಂಖ್ಯೆ: ಕ.ರಾ.ಹ.ಸಂ/ಪ್ರ.ಕ/ಪ್ರ.ವ್ಯ/ ವೃತ್ತ-1 / 42 /2017-18* — *ದಿನಾಂಕ: ~~19~~ 23-10-2017*

## INTER OFFICE NOTE

| | |
|---|---|
| **Sub:** | ***Introduction of special package scheme to SC/ST entrepreneurs for setting up of textile units*** |
| **Ref:** | ***(i)G O No. 44 2017 dated 7.9.2017*** |
| | ***(ii)letter dated 20.9.2017 from Deputy Secretary (Textiles) C&I Dept.*** |

****

*The Government of Karnataka has introduced a special scheme for SC/ST entrepreneurs for setting up of textile units vide its G O referred above. Following are salient features of the scheme:*

1. *The scheme is applicable for SC/ST entrepreneurs who are putting up SMEs in textile sector.*

2. *The scheme stipulates that the promoters should bring in minimum 10% as their contribution towards fixed assets and 75% of the cost of fixed assets will be given as grant by the Government and the balance 15% will be loan from Banks/FI.*

3. *Further the unit is eligible for interest subsidy up to 15% of the cost of fixed assets. The units may also avail the facilities available from the central government under TUF scheme. However the total grant shall not exceed 90% of the cost of fixed assets.*

*Branches are hereby advised to give wide publicity to the above scheme and examine the loan proposals as per the Lending policy norms of the Corporation*

21/X/17

**EXECUTIVE DIRECTOR-I**

To:

All the BMs/AGMs/DGMs of Branch Offices
All the DGMs/AGMs of Audit Cells
All the Department Heads in HO
EA to MD, Library
General Managers
Executive Director – II

ಕರ್ನಾಟಕ ಸರ್ಕಾರ

ಸಂಖ್ಯೆ: ವಾಕೈ 44 ಜಕೈಯೋ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:20.9.2017

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಬೆಂಗಳೂರು-560 001.

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು / ಕಾರ್ಯಕಾರಿ ನಿರ್ದೇಶಕರು,
ಕರ್ನಾಟಕ ರಾಜ್ಯ ಹಣಕಾಸು ನಿಗಮ,
ನಂ.1/1 ತಿಮ್ಮಯ್ಯ ರಸ್ತೆ, ಬೆಂಗಳೂರು-52.

2. **Convinor SLBC,**
**corporate office**, ಗಾಂಧಿನಗರ,
ಬೆಂಗಳೂರು-9.

ಮಾನ್ಯರೆ,

ವಿಷಯ: ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ SCP/TSP ಅಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಎಸ್.ಎಂ.ಇ. ಘಟಕಗಳ ಸ್ಥಾಪನೆಗೆ ಸರ್ಕಾರದ ಸಹಾಯಧನ ಯೋಜನೆಯನ್ನು ಅನುಷ್ಠಾನಗೊಳಿಸುವ ಮಾರ್ಗಸೂಚಿ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ವಾಕೈ 44 ಜಕೈಯೋ 2017, ದಿನಾಂಕ: 07.9.2017

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಆದೇಶದಲ್ಲಿ ರಾಜ್ಯದ ಜವಳಿ ಉದ್ದಿಮೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ವೈಯಕ್ತಿಕ ಫಲಾನುಭವಿ/ ಪಾಲುದಾರಿಕೆ ಸಂಸ್ಥೆ/ ಕಂಪನಿ/ ಜವಳಿ ಸಹಕಾರ ಸಂಘ/ ಸಂಸ್ಥೆಯ ವತಿಯಿಂದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕ ಪ್ರಾರಂಭಿಸಲು ಆಸಕ್ತಿ ಇರುವ ಉದ್ದಿಮೆದಾರರನ್ನು ಉತ್ತೇಜಿಸುವ ಸಲುವಾಗಿ, ಯೋಜನಾ ವೆಚ್ಚದ ಶೇ.75 ರಷ್ಟು ಸಹಾಯಧನವನ್ನು ಕರ್ನಾಟಕ ಸರ್ಕಾರದಿಂದ ನೀಡುವ ಯೋಜನೆಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಸದರಿ ಯೋಜನೆಯ ಸೌಲಭ್ಯವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳು ಪಡೆಯಲು ಅವಶ್ಯವಿರುವ ಸಾಲವನ್ನು ಹಣಕಾಸು ಸಂಸ್ಥೆಗಳಿಂದ /ಬ್ಯಾಂಕ್‌ಗಳಿಂದ ಒದಗಿಸಲು ಹಾಗೂ ರಾಜ್ಯ ಸರ್ಕಾರದ ಈ ಯೋಜನೆಯ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಲು ಈ ಯೋಜನೆಗೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಳ್ಳುವಂತೆ ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ರೇವಯ್ಯ)
ಸರ್ಕಾರದ ಉಪಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪ್ರತಿ: ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ,
ಶುಭೋದಯ ಕಾಂಪ್ಲೆಕ್ಸ್ ನಂ 86, ರೈಲ್ವೆ ಸಮಾನಾಂತರ ರಸ್ತೆ, ಕುಮಾರಪಾರ್ಕ್ ಪಶ್ಚಿಮ,
ಬೆಂಗಳೂರು-560 020

ಕರ್ನಾಟಕ ಸರ್ಕಾರ

ವಿಷಯ: ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ - ವಿಶೇಷ ಘಟಕ / ಗಿರಿಜನ ಉಪಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ ಯೋಜನೆಯ ಮಾರ್ಗಸೂಚಿ ಹೊರಡಿಸುವ ಕುರಿತು.

*********

**ಸರ್ಕಾರಿ ಆದೇಶ ಸಂಖ್ಯೆ: ವಾಕ್ಕೈ 44 ಜಕ್ಕೈಯೋ 2017, ದಿನಾಂಕ: 07.9.2017**

ರಾಜ್ಯದ ಜವಳಿ ಉದ್ದಿಮೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ವೈಯಕ್ತಿಕ ಫಲಾನುಭವಿ /ಪಾಲುದಾರಿಕೆ ಸಂಸ್ಥೆ/ಕಂಪನಿ/ ಜವಳಿ ಸಹಕಾರಿ ಸಂಘ /ಸಂಸ್ಥೆಯ ವತಿಯಿಂದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕ ಪ್ರಾರಂಭಿಸಲು ಉತ್ತೇಜಿಸುವ ಸಲುವಾಗಿ ಈ ಯೋಜನೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿರುತ್ತದೆ. ಜವಳಿ ಉದ್ದಿಮೆಯನ್ನು ಪ್ರಾರಂಭಿಸುವವರಿಗೆ ವರಮಾನ ಹೆಚ್ಚಿಸಲು ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ಒದಗಿಸುವ ಉದ್ದೇಶದಿಂದ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ರಾಜ್ಯ ಸರ್ಕಾರದ ಸಹಾಯಧನ ನೀಡಲು ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಯೋಜನೆಯಡಿ ಸರ್ಕಾರದಿಂದ ಸಹಾಯಧನ ಬಿಡುಗಡೆ ಮಾಡಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಈ ಕೆಳಗಿನಂತೆ ನಿಗದಿಪಡಿಸಿದೆ.

1. **ಎಸ್.ಎಂ.ಇ** (Small & Micro Enterprises: Investment in plant & machinery) **ಘಟಕದ ವಿವರಣೆ**
   - Micro – ರೂ. 25.00 ಲಕ್ಷಗಳ ವರೆಗಿನ ಯಂತ್ರೋಪಕರಣಗಳೊಂದಿಗೆ ಸ್ಥಾಪಿಸುವ ಘಟಕ.
   - Small – ರೂ. 25.00 ಲಕ್ಷಗಳಿಂದ ರೂ.500.00 ಲಕ್ಷಗಳ ಯಂತ್ರೋಪಕರಣಗಳೊಂದಿಗೆ ಸ್ಥಾಪಿಸುವ ಘಟಕ.

2. **ಯೋಜನೆಯ ಅರ್ಹತೆ:**
   - ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವೈಯಕ್ತಿಕ ಫಲಾನುಭವಿ/ ಪಾಲುದಾರಿಕೆ ಸಂಸ್ಥೆ/ ಸಂಘ/ ಸಂಸ್ಥೆಗಳು/ಕಂಪನಿ (ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರತಕ್ಕದ್ದು)
   - ಸಹಕಾರಿ ಕಾಯ್ದೆಯಡಿ ನೊಂದಾಯಿತ ಜವಳಿ ಸಹಕಾರಿ ಸಂಘಗಳು (ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರತಕ್ಕದ್ದು)
   - ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಘಟಕ ಸ್ಥಾಪಿಸಲು ಉದ್ದೇಶಿಸಿರುವ ಪರಿಶಿಷ್ಟ ಜಾತಿ / ಪಂಗಡದ ವೈಯಕ್ತಿಕ ಫಲಾನುಭವಿ /ಪಾಲುದಾರಿಕೆ ಸಂಸ್ಥೆ/ಕಂಪನಿ/ ಜವಳಿ ಸಹಕಾರಿ ಸಂಘ /ಸಂಸ್ಥೆಯ ಹೆಸರಿನಲ್ಲಿ ಭೂ ಪರಿವರ್ತನೆಯಾಗಿ ಕೈಗಾರಿಕೆಗೆ ಯೋಗ್ಯವಾದ ಜಮೀನು ಹೊಂದಿರತಕ್ಕದ್ದು ಅಥವಾ ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ ಯಿಂದ ಕೈಗಾರಿಕಾ ನಿವೇಶನ ಹಂಚಿಕೆಯಾದ / ಮಂಜೂರಾತಿ ಪತ್ರ ಹೊಂದಿರತಕ್ಕದ್ದು ಅಥವಾ 25 ವರ್ಷಗಳ ದೀರ್ಘಾವಧಿ ಕಾಲಕ್ಕೆ ಬಾಡಿಗೆ/ಲೀಸ್ ಗಾಗಿ ಕಟ್ಟಡವನ್ನು ಹೊಂದಿರತಕ್ಕದ್ದು.
   - ಜವಳಿ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುವ ಜವಳಿ ಸಹಕಾರಿ ಸಂಘ/ಎನ್.ಜಿ.ಓ/ಟ್ರಸ್ಟ್/ ಸಂಸ್ಥೆಗಳು ನೊಂದಾಯಿಸಿ ಕನಿಷ್ಠ 03 ವರ್ಷಗಳಾಗಿರಬೇಕು.

..2

- ಜವಳಿ ಸಹಕಾರಿ ಸಂಘ/ಸಂಸ್ಥೆಯವರು ಸಣ್ಣ ಪ್ರಮಾಣದಲ್ಲಿ ಸ್ಥಾಪಿಸುವ ಘಟಕದಲ್ಲಿ ತಾಂತ್ರಿಕ ಅರ್ಹತೆ (Diploma/B.Tech(Textiles) / ಅನುಭವವುಳ್ಳ ಕನಿಷ್ಠ ಒಬ್ಬರನ್ನು ನೇಮಕಾತಿ ಮಾಡತಕ್ಕದ್ದು.

3. ಅ. ಹಣಕಾಸಿನ ಮೂಲ :-

| ಕ್ರ. ಸಂ | ಯೋಜನೆ | ಸರ್ಕಾರದ ಸಹಾಯಧನ | ಬ್ಯಾಂಕಿನ ಸಾಲ | ಫಲಾನುಭವಿ / ಸಂಸ್ಥೆಯ ವಂತಿಕೆ | ಒಟ್ಟು |
|---|---|---|---|---|---|
| 1 | ವಿ.ಘ.ಯೋ | ಶೇ.75% | ಶೇ.15% | ಶೇ.10% | ಶೇ.100% |
| 2 | ಗಿ.ಉ.ಯೋ | ಶೇ.75% | ಶೇ.15% | ಶೇ.10% | ಶೇ.100% |

ಆ. ಹಣಕಾಸಿನ ನೆರವು

| ಕ್ರ. ಸಂ | ಯೋಜನೆ | ಸರ್ಕಾರದ ಸಹಾಯಧನ | ಬ್ಯಾಂಕಿನ ಸಾಲಕ್ಕೆ ಬಡ್ಡಿ ಸಹಾಯಧನ | ಒಟ್ಟು ಸಹಾಯಧನ |
|---|---|---|---|---|
| 1 | ವಿ.ಘ.ಯೋ | ಶೇ.75% | ಶೇ.15% | ಶೇ.90% |
| 2 | ಗಿ.ಉ.ಯೋ | ಶೇ.75% | ಶೇ.15% | ಶೇ.90% |

- 2017-18ನೇ ಸಾಲಿನಿಂದ ನೂತನ ಜವಳಿ ನೀತಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಘಟಕಗಳಿಗೆ ನೀಡಲಾದ ಸಹಾಯಧನದ ಮೊತ್ತಕ್ಕೆ ವ್ಯತ್ಯಾಸದ ಅರ್ಹ ಸಹಾಯಧನದ ಮೊತ್ತವನ್ನು ನೀಡಲಾಗುವುದು.
- ಯೋಜನೆ ಅನುಷ್ಠಾನವನ್ನು ಇಲಾಖೆಯಿಂದ ನಿಯೋಜಿಸಲಾಗುವ ಏಜೆನ್ಸಿ/ ಸಂಸ್ಥೆ ಮುಖಾಂತರ 3rd party inspection ಮಾಡಿಸಿ ವರದಿ ಸಲ್ಲಿಸಿದ ನಂತರ ಘಟಕಗಳಿಗೆ ಅನುಮೋದಿತ ಸಹಾಯಧನವನ್ನು ಪ್ರೋರೇಟಾ ಆಧಾರದ ಮೇಲೆ ಸಾಲ ಮಂಜೂರಾತಿ ನೀಡಿದ ಬ್ಯಾಂಕಿಗೆ ಬಿಡುಗಡೆ ಮಾಡಲಾಗುವುದು.
- ಯೋಜನೆ ಅನುಷ್ಠಾನಕ್ಕೆ ಅವಶ್ಯಕವಿರುವ ದುಡಿಮೆ ಬಂಡವಾಳವನ್ನು ವೈಯಕ್ತಿಕ ಫಲಾನುಭವಿ /ಪಾಲುದಾರಿಕೆ ಸಂಸ್ಥೆ/ಕಂಪನಿ/ ಜವಳಿ ಸಹಕಾರಿ ಸಂಘ /ಸಂಸ್ಥೆಯವರೇ ಸ್ವಂತ ಭರಿಸತಕ್ಕದ್ದು ಅಥವಾ ಬ್ಯಾಂಕುಗಳಿಂದ /ಹಣಕಾಸು ಸಂಸ್ಥೆಗಳಿಂದ ಪಡೆದುಕೊಳ್ಳತಕ್ಕದ್ದು.

4. **ಸರ್ಕಾರದ ಸಹಾಯಧನ**

- ಸರ್ಕಾರದ ಸಹಾಯಧನವನ್ನು ಯೋಜನೆಯ ಕಟ್ಟಡ (Building), ಯಂತ್ರೋಪಕರಣ(Plant & Machineries) ಯಂತ್ರೋಪಕರಣಗಳ ಸ್ಥಾಪನೆ (Erection), ಅನುಸ್ಥಾಪನ(Installation), ಉತ್ಪಾದನಾ ಪೂರ್ವ ಚಟುವಟಿಕೆಗೆ (Commissioning) ಕಾರ್ಯಗಳಿಗೆ, ಜೆನರೇಟರ್ ಸೆಟ್, ಹಾಗೂ ಕ್ಯಾಪ್ಟೀವ್ ಪವರ್ ಜನರೇಷನ್ (Captive Power Generation) ಗಳಿಗೆ ಮಾತ್ರ ಪರಿಗಣಿಸಲಾಗುವುದು. (ನೂತನ ಜವಳಿ ನೀತಿ ಅಡಿ Fixed assets ಗೆ ಪರಿಗಣಿಸುವಂತೆ)
- ಈ ಯೋಜನೆಯಡಿ ಮಂಜೂರಾದ ಘಟಕಗಳು ಕೇಂದ್ರ ಸರ್ಕಾರದ ಟಿ.ಯು.ಎಫ್ ಯೋಜನೆ ಹಾಗೂ ಇತರೆ ಯೋಜನೆಗಳ ಅಡಿಯಲ್ಲಿ ಎಂ.ಎಸ್.ಇ. ಘಟಕಗಳಿಗೆ ಲಭ್ಯವಿರುವ ಸೌಲಭ್ಯಗಳನ್ನು ಪಡೆದುಕೊಳ್ಳಬಹುದಾಗಿದೆ. ಶೇ 15ರ ಬಡ್ಡಿ ಸಹಾಯಧನದೊಂದಿಗೆ ಎಲ್ಲಾ ಯೋಜನೆಗಳು ಸೇರಿ ಒಟ್ಟಾರೆ ಗರಿಷ್ಠ ಶೇ.90 ರಷ್ಟು ಸಹಾಯಧನವನ್ನು ಮಾತ್ರ ಪಡೆದುಕೊಳ್ಳಬಹುದಾಗಿದೆ.

೫. ಸಹಾಯಧನ ಬಿಡುಗಡೆ ವಿಧಾನ

- ಬ್ಯಾಂಕಿನಿಂದ ಯೋಜನೆಯ ಅನುಷ್ಠಾನಕ್ಕೆ ಮಂಜೂರು ಮಾಡಲಾದ ಸಾಲದ ಪತ್ರವನ್ನು ಸಲ್ಲಿಸಿದ ನಂತರ ವೈಯಕ್ತಿಕ ಫಲಾನುಭವಿ /ಪಾಲುದಾರಿಕೆ ಸಂಸ್ಥೆ /ಕಂಪನಿ/ ಜವಳಿ ಸಹಕಾರಿ ಸಂಘ / ಸಂಸ್ಥೆಗೆ ಸಾಲ ಮಂಜೂರಾತಿ ನೀಡಿದ ಬ್ಯಾಂಕಿನ ಖಾತೆಗೆ ಸರ್ಕಾರದ ಅರ್ಹ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.
- ಯೋಜನೆಯು ಅನುಮೋದನೆಯಾದ ನಂತರ ಇಲಾಖೆಯ ಸಹಾಯಧನದ ವಂತಿಕೆಯನ್ನು ಪ್ರೋರೇಟಾ ಆಧಾರದ ಮೇಲೆ 4 ಹಂತಗಳಲ್ಲಿ ಅನುದಾನವನ್ನು ಸಾಲ ನೀಡಿದ ಬ್ಯಾಂಕಿಗೆ / ಹಣಕಾಸು ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು.

6. **ಫಲಾನುಭವಿ / ಪಾಲುದಾರಿಕೆ ಸಂಸ್ಥೆ/ಕಂಪನಿ/ ಜವಳಿ ಸಹಕಾರಿ ಸಂಘದ/ ಸಂಸ್ಥೆಯ ಪಾತ್ರ :**

- ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿ ಹಾಗೂ ನಿರ್ವಹಣೆ ವೈಯಕ್ತಿಕ ಫಲಾನುಭವಿ/ ಪಾಲುದಾರಿಕೆ ಸಂಸ್ಥೆ/ಕಂಪನಿ/ ಜವಳಿ ಸಹಕಾರಿ ಸಂಘ /ಸಂಸ್ಥೆಗೆ ಅನ್ವಯಿಸುವುದು.
- ಯೊಜನೆಯ ಅನುಷ್ಠಾನಕ್ಕೆ ಬೇಕಾದ ಭೂಮಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ವೈಯಕ್ತಿಕ ಫಲಾನುಭವಿಗಳು /ಪಾಲುದಾರಿಕೆ ಸಂಸ್ಥೆ/ಕಂಪನಿ/ ಜವಳಿ ಸಹಕಾರಿ ಸಂಘ /ಸಂಸ್ಥೆಯವರು ಹೊಂದಿರತಕ್ಕದ್ದು.
- ಯೋಜನೆಗೆ ಇಲಾಖೆಯ ಪೂರ್ವಾನುಮತಿ ಪಡೆಯತಕ್ಕದ್ದು.
- ಯೋಜನೆ ಅನುಷ್ಠಾನವನ್ನು ಇಲಾಖೆಯಿಂದ ನಿಯೋಜಿಸಲಾಗುವ ಏಜೆನ್ಸಿ / ಸಂಸ್ಥೆ ಮುಖಾಂತರ 3rd party inspection ಮಾಡಿಸಿ ವರದಿ ಸಲ್ಲಿಸುವುದು.

7. <u>**ದಾಖಲಾತಿಗಳು:**</u>

- **ವೈಯಕ್ತಿಕ ಫಲಾನುಭವಿ /ಪಾಲುದಾರಿಕೆ ಸಂಸ್ಥೆ/ಕಂಪನಿ/ ಜವಳಿ ಸಹಕಾರಿ ಸಂಘ /ಸಂಸ್ಥೆಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ಸಾಮಾನ್ಯ ದಾಖಲಾತಿಗಳು**

1. ಬ್ಯಾಂಕಿನಿಂದ ಯೋಜನೆಗೆ ನೀಡಲಾಗುವ ಸಾಲ ಮಂಜೂರಾತಿ ಪತ್ರ
2. ವಿವರವಾದ ಯೋಜನಾ ವರದಿ(ಡಿ.ಪಿ.ಆರ್).
3. ಖಾಲಿ ನಿವೇಶನದ ದಾಖಲಾತಿಗಳು & ಆರ್.ಟಿ.ಸಿ ಪ್ರತಿ / ಕೆ.ಐ.ಎ.ಡಿ.ಬಿ. / ಕೆ.ಎಸ್.ಎಸ್.ಐ.ಡಿ.ಸಿ. ನಿಗಮಗಳಿಂದ ನಿವೇಶನ ಹಂಚಿಕೆಯಾದ ಪತ್ರ.
4. ಕಟ್ಟಡದ ನಕ್ಷೆ & ಕಟ್ಟಡದ ಅಂದಾಜು ಪಟ್ಟಿ
5. ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಮೊತ್ತವನ್ನು ಭರಿಸುವ ಬಗ್ಗೆ ಮುಚ್ಚಳಿಕೆ ಪತ್ರ.
6. ಯೋಜನೆಯ ಅನುಷ್ಠಾನಕ್ಕೆ ಅವಶ್ಯವಿರುವ ಇನ್ನಿತರೆ ದಾಖಲಾತಿಗಳು.

- **ಜವಳಿ ಸಹಕಾರಿ ಸಂಘ / ಸಂಸ್ಥೆಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು :**

1. ಜವಳಿ ಸಹಕಾರಿ ಸಂಘ/ಸಂಸ್ಥೆಯ ಬಯೋ ಡೇಟಾ.
2. ಜವಳಿ ಸಹಕಾರಿ ಸಂಘ/ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.

3. ಜವಳಿ ಸಹಕಾರಿ ಸಂಘ/ಸಂಸ್ಥೆಯ ಬೈಲಾ ಪ್ರತಿ.
4. ಜವಳಿ ಸಹಕಾರಿ ಸಂಘ / ಸಂಸ್ಥೆಯ ಆಡಳಿತ ಮಂಡಳಿಯ ಠರಾವು ಪ್ರತಿ
5. ಜವಳಿ ಸಹಕಾರಿ ಸಂಘ /ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರ ಪಟ್ಟಿ
6. ಜವಳಿ ಸಹಕಾರಿ ಸಂಘ /ಸಂಸ್ಥೆಯಲ್ಲಿ ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರುವ ಬಗ್ಗೆ ದೃಡೀಕರಣ ಪತ್ರ.
7. ಕಳೆದ ಮೂರು ವರ್ಷಗಳ ಆಡಿಟ್ ವರದಿ.

- **ಕಂಪನಿ/ಪಾಲುದಾರಿಕೆ ಸಂಸ್ಥೆಯವರು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು :**

1. ಕಂಪನಿ/ಪಾಲುದಾರಿಕೆ ಸಂಸ್ಥೆಯವರ ಬಯೋ ಡೇಟಾ.
2. ಕಂಪನಿ/ಪಾಲುದಾರಿಕೆ ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.
3. ಕಂಪನಿ/ಪಾಲುದಾರಿಕೆ ಸಂಸ್ಥೆಯ ಮೆಮೊರ್‍ಯಾಂಡಂ & ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಪ್ರತಿ.
4. ಕಂಪನಿ/ಪಾಲುದಾರಿಕೆ ಸಂಸ್ಥೆಯ ಆಡಳಿತ ಮಂಡಳಿಯ ಠರಾವು ಪ್ರತಿ
5. ಕಂಪನಿ/ಪಾಲುದಾರಿಕೆ ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರ ಪಟ್ಟಿ
6. ಕಂಪನಿ/ಪಾಲುದಾರಿಕೆ ಸಂಸ್ಥೆಯಲ್ಲಿ ಶೇ.100 ರಷ್ಟು ಪರಿಶಿಷ್ಟ ಜಾತಿ &ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರುವ ಬಗ್ಗೆ ದೃಡೀಕರಣ ಪತ್ರ.

- **ವೈಯಕ್ತಿಕ ಫಲಾನುಭವಿಗಳು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು :**

1. ಫಲಾನುಭವಿ ಬಯೋ ಡೇಟಾ
2. ಇತ್ತೀಚಿನ ಭಾವ ಚಿತ್ರ ಮತ್ತು ಆಧಾರ್ ಕಾರ್ಡ್ ಪ್ರತಿ.
3. ಜಾತಿ ಪ್ರಮಾಣ ಪತ್ರ.
4. ವಿವರವಾದ ಯೋಜನಾ ವರದಿ(ಡಿ.ಪಿ.ಆರ್).

7. **<u>ಷರತ್ತು ಮತ್ತು ನಿಭಂದನೆಗಳು</u>**

1. ಯೋಜನೆಯ ಪ್ರಸ್ತಾವನೆಯನ್ನು **"ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆ"**ಯಲ್ಲಿ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು.
2. ಈ ಯೋಜನೆಯಡಿ ದೊರೆಯಲಿರುವ ಸಹಾಯಧನವು ಇಲಾಖೆಯ ವಿ.ಫ.ಯೋ/ಗಿ.ಉ.ಯೋ ಗಳಡಿ ಲಭ್ಯವಿರುವ ಅನುದಾನಕ್ಕೆ ಒಳಪಡುವುದರಿಂದ ಸದರಿ ಸಹಾಯಧನವನ್ನು ಘಟಕದವರು ಹಕ್ಕು ಎಂದು ಭಾವಿಸತಕ್ಕದ್ದಲ್ಲ.
3. ಸರ್ಕಾರದ ಮೊದಲನೇ ವಂತಿಕೆ ಬಿಡುಗಡೆಯಾದ 18 ತಿಂಗಳ ಅವಧಿಯಲ್ಲಿ ಫಲಾನುಭವಿ / ಜವಳಿ ಸಹಕಾರಿ ಸಂಘ /ಸಂಸ್ಥೆಯವರು ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು.
4. ಅನುಷ್ಠಾನಕ್ಕೆ ಅವಶ್ಯಕವಿರುವ ವಿವಿಧ ಇಲಾಖೆ/ ನಿರ್ದಿಷ್ಟ ಪ್ರಾಧಿಕಾರಗಳ ಅನುಮತಿಗಳನ್ನು ಪಡೆಯತಕ್ಕದ್ದು.
5. ಕಟ್ಟಡ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನಿಗದಿತ ಅನುಮೋದನೆ ಪಡೆಯತಕ್ಕದ್ದು.
6. ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರದಿಂದ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಗಳಿಗೆ ಬಳಸತಕ್ಕದ್ದು.

..5

7. ಯೋಜನಾ ಅನುಷ್ಠಾನದಲ್ಲಿ ಬದಲಾವಣೆಗಳಿದ್ದಲ್ಲಿ ಇಲಾಖೆಯಿಂದ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸತಕ್ಕದ್ದು.
8. ಇಲಾಖೆಯು ನಿಗದಿಪಡಿಸುವ ನಮೂನೆಯಲ್ಲಿ ಷರತ್ತು ಮತ್ತು ನಿಬಂಧನೆಗಳ ಬಾಂಡ್‌ನ್ನು ನೀಡತಕ್ಕದ್ದು.
9. ಯೋಜನಾ ಅನುಷ್ಠಾನದ ಪ್ರತಿ ಹಂತದ ಆರ್ಥಿಕ ಹಾಗೂ ಭೌತಿಕ ಪ್ರಗತಿ ವರದಿಯನ್ನು ಕಾಲಕಾಲಕ್ಕೆ ಇಲಾಖೆಗೆ ಸಲ್ಲಿಸುವುದು.
10. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಗತಿಯನ್ನು ಪರಿಗಣಿಸಿ ವೈಯಕ್ತಿಕ ಫಲಾನುಭವಿ /ಪಾಲುದಾರಿಕೆ ಸಂಸ್ಥೆ/ಕಂಪನಿ/ ಜವಳಿ ಸಹಕಾರಿ ಸಂಘ /ಸಂಸ್ಥೆಯ ಹಣ ಹಾಗೂ ಸರ್ಕಾರದ ಅನುದಾನವನ್ನು ಪ್ರೋರೆಟಾ ಆಧಾರದ ಮೇಲೆ ಹಂತ ಹಂತವಾಗಿ ಹಣವನ್ನು ಬಿಡುಗಡೆ ಮಾಡುವುದು.
11. ಸದರಿ ಘಟಕವನ್ನು ಸರ್ಕಾರದ ಪೂರ್ವಾನುಮತಿ ಪಡೆಯದೆ ಮಾರಾಟ ಅಥವಾ ಪರಬಾರೆಯನ್ನು ಮಾಡತಕ್ಕದ್ದಲ್ಲ.
12. ಸರ್ಕಾರದ ಮೊದಲನೇ ವಂತಿಕೆ ಬಿಡುಗಡೆಯಾದ 18 ತಿಂಗಳ ಅವಧಿಯೊಳಗೆ ಈ ಯೋಜನೆ ಅಡಿ ಮಂಜೂರಾದ ಘಟಕವು ಕಾರ್ಯೋನ್ಮುಖವಾಗತಕ್ಕದ್ದು ತಪ್ಪಿದಲ್ಲಿ ಸರ್ಕಾರದ ಮಂಜೂರಾತಿ ಆದೇಶವನ್ನು ಪುನರ್ ಪರಿಶೀಲಿಸಲಾಗುವುದು ಅಥವಾ ರದ್ದುಪಡಿಸಲಾಗುವುದು.
13. ಈ ಯೋಜನೆಯಡಿ ಮಂಜೂರಾದ ಘಟಕವು ಕನಿಷ್ಟ 05 ವರ್ಷಗಳ ಕಾಲ ನಿರಂತರವಾಗಿ ಚಾಲನೆಯಲ್ಲಿರತಕ್ಕದ್ದು. ಘಟಕವು ನಿರಂತರವಾಗಿ 6 ತಿಂಗಳ ಅವಧಿಗೆ ಸ್ಥಗಿತಗೊಂಡ ಪಕ್ಷದಲ್ಲಿ ಇಲಾಖೆಯಿಂದ ಬಿಡುಗಡೆಯಾದ ಪೂರ್ಣ ಅನುದಾನವನ್ನು ಸರ್ಕಾರಕ್ಕೆ ಮರುಪಾವತಿಸತಕ್ಕದ್ದು. ತಪ್ಪಿದಲ್ಲಿ ಭೂ ಕಂದಾಯ ಕಾಯ್ದೆ ಅಡಿಯಡಿ ವಸೂಲಾತಿಗೆ ಕ್ರಮವಹಿಸಲಾಗುವುದು.
14. ಸರ್ಕಾರ / ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸುವ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸತಕ್ಕದ್ದು.

ಈ ಆದೇಶವನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ರಾಜ್ಯ ಅನುಸೂಚಿತ ಜಾತಿ / ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆ ದಿನಾಂಕ: 02.06.2017ರಲ್ಲಿ ಅನುಮೋದಿಸಿದಂತೆ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 276 ವೆಚ್ಚ – 1/ 2017, ದಿನಾಂಕ: 05.08.2017ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರೇವಯ್ಯ) 7/9
ಸರ್ಕಾರದ ಉಪಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, (ಎ ಮತ್ತು ಇ) ಜಿ.ಅಂಡ್ ಎಸ್.ಎ., ಕರ್ನಾಟಕ, ಆಡಿಟ್ ಭವನ, ಬೆಂಗಳೂರು.
2. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1).
5. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಜವಳಿ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ.
2. ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.